# ಅರಣ್ಯ ಇಲಾಖೆ ಮರ ಡಿಪೋಗಳ ಟಿಂಬರ್ ಮಾರಾಟಕ್ಕೆ ಇ - ಮಾರ್ಕೆಟ್

**ಮನೋಜ್ ರಾಜನ್**
ಬೆಂಗಳೂರು

ಅಂತರ್ಜಾಲದ ನಂಟು ಬೆಸೆದುಕೊಂಡು ಕ್ಷಣ ಮಾತ್ರದಲ್ಲೇ ಅಗತ್ಯ ವಸ್ತುಗಳನ್ನು ಖರೀದಿಸಬಹುದಾದ ಆನ್‌ಲೈನ್ ಮಾರಾಟ ವ್ಯವಸ್ಥೆ ಮಾರುಕಟ್ಟೆಯ ಅವಿಭಾಜ್ಯ ಅಂಗ. ತಂತ್ರಜ್ಞಾನ ಬಳಕೆಯಿಂದ ಜಗತ್ತಿನ ಎಲ್ಲಾ ಕ್ಷೇತ್ರಗಳಲ್ಲಿನ ವ್ಯಾಪಾರ ವಹಿವಾಟು ಗಡಿಗಳನ್ನು ಮೀರಿ ಬೆಳೆಯುತ್ತಿದೆ. ಬೆರಳ ತುದಿಯ ಸ್ಪರ್ಶದಲ್ಲೇ ಬಹು ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ಆನ್‌ಲೈನ್ ವ್ಯಾಪಾರ ವಹಿವಾಟು ಇದೀಗ ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿನ ಟಿಂಬರ್ ಮಾರಾಟಕ್ಕೂ ಸ್ಪರ್ಶಿಸಿದೆ.

**ಆನ್‌ಲೈನ್ ಟಿಂಬರ್ ಮಾರಾಟ ಎಂದರೆ ಏನು? :**

ಅರಣ್ಯ ಇಲಾಖೆಯು ತಂತ್ರಜ್ಞಾನ ಬಳಕೆಯಿಂದ ಟಿಂಬರ್ ಡಿಪೋಗಳಲ್ಲಿನ ಮರಗಳ ಲಾಟ್‌ಗಳನ್ನು ಮಾರಾಟ ಮಾಡಲು ಆನ್‌ಲೈನ್ ಟಿಂಬರ್ ಇ-ಮಾರ್ಕೆಟ್ ವೇದಿಕೆಯನ್ನು ಸ್ಥಾಪಿಸಿದೆ. ಈ ವೇದಿಕೆಯಲ್ಲಿ ಯಾವ ಡಿಪೋದಲ್ಲಿ ಎಷ್ಟು ಮರಗಳ ಲಾಟ್‌ಗಳಿವೆ. ಯಾವ ತಳಿಯ ಮರಗಳು, ಪ್ರತಿಯೊಂದು ಲಾಟ್‌ನಲ್ಲಿ ಲಭ್ಯವಾಗುವ ಮರಗಳ ಅಳತೆ ಮಾಹಿತಿಗಳು ಲಭ್ಯವಾಗಲಿದೆ. ಒಟ್ಟಾರೆ, ವ್ಯಾಪಾರ ವಹಿವಾಟು ಗಣಕೀಕೃತಗೊಂಡು ಆನ್‌ಲೈನ್ ಟಿಂಬರ್ ಮಾರಾಟದಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಸರಳತೆಯಿಂದ ಪೂರ್ಣಗೊಳ್ಳುವ ಕಾರ್ಯವಿಧಾನಕ್ಕೆ ಆನ್‌ಲೈನ್ ಟಿಂಬರ್ ಮಾರಾಟ ವ್ಯವಸ್ಥೆ ಎಂದು ಕರೆಯಲಾಗುತ್ತದೆ.

**ಟಿಂಬರ್ ಇ - ಟೆಂಡರ್‌ನಲ್ಲಿ ಭಾಗವಹಿಸಲು ಅನುಸರಿಸಬೇಕಾದ ಕ್ರಮಗಳು ಏನು? :**

ಅರಣ್ಯ ಇಲಾಖೆಯಲ್ಲಿ ನೋಂದಾಯಿತ ವರ್ತಕರು ಟಿಂಬರ್ ಇ-ಟೆಂಡರ್‌ನಲ್ಲಿ ಭಾಗವಹಿಸಲು ನಿಗದಿತ ಟೆಂಡರ್ ದಿನಾಂಕಕ್ಕೂ ಮುನ್ನ, ಅಂದರೆ ಇಲಾಖೆ ನಿಗದಿಪಡಿಸಿದ ದಿನಾಂಕದ ಒಳಗೆ 20 ಸಾವಿರ ರೂಪಾಯಿಗಳನ್ನು ಮುಂಗಡ ಠೇವಣಿಯಾಗಿ ಪಾವತಿಸಬೇಕು. ಬಳಿಕ ವರ್ತಕರಿಗೆ ಪ್ರತ್ಯೇಕವಾಗಿ ನೀಡಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ **https://ka.remsl.in** ವೆಬ್‌ಸೈಟ್‌ನಲ್ಲಿ ಲಾಗ್ ಇನ್ ಆಗಬೇಕು.

ವೆಬ್‌ಸೈಟ್‌ನಲ್ಲಿ ಲಭ್ಯವಿರುವ ವಿವಿಧ ತಳಿಯ ಮರಗಳ ಲಾಟ್ ಮಾಹಿತಿಯನ್ನು ಪರಿಶೀಲಿಸಬಹುದು. ಇ-ಟೆಂಡರ್ ನಿಗದಿಯಾದ ದಿನಾಂಕದಂದು ಡಿಪೋ ವ್ಯಾಪ್ತಿಯಲ್ಲಿ ಇ-ಟೆಂಡರ್ ಹಾಲ್‌ನಲ್ಲಿ ಖುದ್ದಾಗಿ ಅಗತ್ಯ ಮರದ ಲಾಟ್‌ಗಳಿಗೆ ಬಿಡ್ ಮಾಡಬಹುದು ಅಥವಾ ವರ್ತಕರು ಇದ್ದ ಸ್ಥಳದಿಂದಲೇ ಬಿಡ್ ಮಾಡಲು ಅವಕಾಶವಿದೆ.

**ಸ್ವಂತ ಮನೆ ನಿರ್ಮಾಣಕ್ಕಾಗಿ ಮರ ಖರೀದಿಸಲು ಇ - ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ :**

ಅರಣ್ಯ ಇಲಾಖೆಯ ಮರಮಟ್ಟು ಸಂಗ್ರಹಾಲಯಗಳಲ್ಲಿ ಲಭ್ಯವಿರುವ ಸಾಗವಾನಿ, ತೊಗಾ, ರೋಜ್ಮ ಅಕೇಶಿಯಾ, ಜಂಗಲಿ ಮರದ ದಿಮ್ಮಿ, ಜಲಾವು, ಎಳೆಗಳು ಬೆಲೇಟ್ಸ್ ಮುಂತಾದ ವಿವಿಧ ಮರದ ದಿಮ್ಮಿಗಳ ಲಾಟ್‌ಗಳನ್ನು ಅಗತ್ಯಕ್ಕೆ ಅನುಸಾರವಾಗಿ ಸ್ವಂತಕ್ಕೆ ಆನ್‌ಲೈನ್ (ಇ-ಟೆಂಡರ್) ನಲ್ಲಿ ಭಾಗವಹಿಸಿ ಖರೀದಿಸಬಹುದು. ನೂತನ ಮನೆ ನಿರ್ಮಾಣ ಮಾಡುತ್ತಿರುವವರು ತಮಗೆ ಅಗತ್ಯ ಮರ ಖರೀದಿ ಮಾಡಬೇಕಾದರೆ, ತಾವು ಕೂಡ ನಿಗದಿತ ಠೇವಣಿ ಅರಣ್ಯ ಇಲಾಖೆಗೆ ಪಾವತಿಸಿ ಆನ್‌ಲೈನ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಜೊತೆಗೆ ವರ್ತಕರು ಇ-ಟೆಂಡರ್ ಬಿಡ್‌ನಲ್ಲಿ ಭಾಗವಹಿಸಲು, ಕೆಲವೊಂದು ನಿರ್ಬಂಧನೆಗಳು ಇವೆ. ಆದರೆ, ಸ್ವಂತಕ್ಕೆ ಖರೀದಿ ಮಾಡುವ ಸಾರ್ವಜನಿಕರಿಗೆ ಕೆಲವೊಂದು ನಿರ್ಬಂಧಗಳನ್ನು ಕೂಡ ಸಡಿಲಿಸಲಾಗಿದೆ. ಸ್ವಂತ ಮನೆ ನಿರ್ಮಾಣ ಮಾಡಿಕೊಳ್ಳಲು, ಅಗತ್ಯ ಮರದ ದಿಮ್ಮಿಗಳನ್ನು ಖರೀದಿಸಲು

ಹರಸಾಹಸ ಪಡುತ್ತಿದ್ದ ನಾಗರೀಕರಿಗೆ ಅರಣ್ಯ ಇಲಾಖೆಯ ಈ ನೂತನ ಆನ್‌ಲೈನ್ ಟೆಂಡರ್ ವ್ಯವಸ್ಥೆ ಉಪಯುಕ್ತವಾಗಿದೆ.

**ಹೊಸದಾಗಿ ಹೆಸರು ನೋಂದಣಿ ಮಾಡಿಕೊಳ್ಳುವುದು ಹೇಗೆ? :**

ಅರಣ್ಯ ಇಲಾಖೆಯು ನಿಗದಿಪಡಿಸಿದ ಆನ್‌ಲೈನ್ ಟಿಂಬರ್ ಇ-ಟೆಂಡರ್ ದಿನಾಂಕಕ್ಕೂ ಮುನ್ನ, ಮರ ಖರೀದಿಗೆ ಅಪೇಕ್ಷಿತರು ತಮ್ಮ ಹೆಸರು, ಖಾಯಂ ವಿಳಾಸ, ಬ್ಯಾಂಕ್ ಖಾತೆ, ಬ್ಯಾಂಕ್‌ನ ಐಎಫ್‌ಎಸ್‌ಸಿ ಕೋಡ್ ಸಂಖ್ಯೆಯನ್ನು ಖುದ್ದಾಗಿ ಅರಣ್ಯ ಇಲಾಖೆಯಲ್ಲಿ ನೀಡಿ ನೋಂದಣಿ ಮಾಡಿಕೊಳ್ಳಬಹುದು ಅಥವಾ ಆನ್‌ಲೈನ್ ಮೂಲಕ ಕೂಡ ಅಗತ್ಯ ಮಾಹಿತಿ ಒದಗಿಸಿ ನೋಂದಣಿ ಮಾಡಿಕೊಳ್ಳಬಹುದು.

ಇದಕ್ಕಾಗಿ **http://trader.remsl.in/login/onlineRegistration.aspx** ವೆಬ್‌ಸೈಟ್‌ನ್ನು ಸಂಪರ್ಕಿಸಿ, ಹೆಸರನ್ನು ನೋಂದಾಯಿಸಿಕೊಂಡ ಪ್ರತಿಯೊಬ್ಬ ಖರೀದಿದಾರರಿಗೂ ಪ್ರತ್ಯೇಕ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ನೀಡಲಾಗುತ್ತದೆ.

**ಅರಣ್ಯ ಇಲಾಖೆಯಲ್ಲಿ ಮರ ಮಾರಾಟಕ್ಕೆ ಹಿಂದೆ ಅನುಸರಿಸುತ್ತಿದ್ದ ಬಹಿರಂಗ ಹರಾಜು ಕಾರ್ಯ ವಿಧಾನ :**

ರಾಜ್ಯದ ವಿವಿಧ ಭಾಗಗಳಲ್ಲಿನ ಇಲಾಖೆಯ ಡಿಪೋದಲ್ಲಿನ ಮರದ ದಿಮ್ಮಿಗಳ ಮಾರಾಟಕ್ಕಾಗಿ ಬಹಿರಂಗ ಹರಾಜು ವ್ಯವಸ್ಥೆ ಜಾರಿಯಲ್ಲಿತ್ತು. ಈ ಪ್ರಕ್ರಿಯೆಯಿಂದಾಗಿ ಖರೀದಿದಾರರು ಮತ್ತು ಅಧಿಕಾರಿಗಳು ಡಿಪೋದಲ್ಲಿನ ಪ್ರತಿಯೊಂದು ಲಾಟ್‌ಗಳಿಗೆ ಮತ್ತು ಅಧಿಕಾರಿಗಳು ಡಿಪೋದಲ್ಲಿನ ಪ್ರತಿಯೊಂದು ಲಾಟ್‌ಗಳಿಗೆ ಭೇಟಿ ನೀಡಿ, ಮರದ ಲಾಟ್‌ನ್ನು ಪರೀಕ್ಷಿಸಿ ಹರಾಜಿನಲ್ಲಿ ಭಾಗವಹಿಸಬೇಕಾಗಿತ್ತು. ಈ ವಿಧಾನದಲ್ಲಿ ಹೆಚ್ಚು ಸ್ಥಳೀಯ ಖರೀದಿದಾರರು ಮಾತ್ರ ಭಾಗವಹಿಸುತ್ತಿದ್ದರು. ಆದ್ದರಿಂದ ಖರೀದಿಗೆ ಹೆಚ್ಚಿನ ಸ್ಪರ್ಧೆ ಲಭ್ಯವಾಗುತ್ತಿರಲಿಲ್ಲ. ಜೊತೆಗೆ ಮರ ಖರೀದಿಗೆ ಕಡಿಮೆ ಬೆಲೆಯನ್ನು ವರ್ತಕರು ಕೂಗುತ್ತಿದ್ದರು. ಜೊತೆಗೆ ಮುಂಜಾನೆ ಆರಂಭವಾದ ಹರಾಜು ಪ್ರಕ್ರಿಯೆ ಪೂರ್ಣಗೊಳಿಸಲು ಸಾಕಷ್ಟು ಸಮಯ ವ್ಯಯವಾಗುತ್ತಿತ್ತು. ಈ ರೀತಿಯ ಸಮಸ್ಯೆಗಳನ್ನು ದೂರ ಮಾಡಲು ಇ-ಟೆಂಡರ್ ವೇದಿಕೆ ಸ್ಥಾಪಿತವಾಗಿದೆ.

**ಆನ್‌ಲೈನ್ ಟಿಂಬರ್ ಇ-ಮಾರ್ಕೆಟ್ ವೇದಿಕೆ :**

ಅರಣ್ಯ ಇಲಾಖೆ ಮತ್ತು ಮರ ಖರೀದಿದಾರರು ಹಾಗೂ ಸಾರ್ವಜನಿಕರ ನಡುವೆ ಉತ್ತಮ ವ್ಯಾಪಾರ ವಹಿವಾಟು ನಡೆಸಲು ಆನ್‌ಲೈನ್ ಟಿಂಬರ್ ಇ-ಮಾರ್ಕೆಟ್ ಸೂಕ್ತ ವೇದಿಕೆಯಾಗಿ ರೂಪುಗೊಂಡಿದೆ. ಅರಣ್ಯ ಇಲಾಖೆ ಮತ್ತು ರೆಮ್ಸ್ ಸಂಸ್ಥೆ ಜೊತೆಯಾಗಿ ಈ ನೂತನ ವೇದಿಕೆಯನ್ನು ಸ್ಥಾಪಿಸಿದೆ. ಇಲಾಖೆಯು ಅರಣ್ಯ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಸಹಕಾರಿಯಾಗುವಂತೆ, ತೊಂದರೆ ಮುಕ್ತ ಟಿಂಬರ್ ಇ-ಮಾರ್ಕೆಟ್‌ಗೆ ಅಗತ್ಯವಿರುವ ತಂತ್ರಜ್ಞಾನವನ್ನು ರೆಮ್ಸ್ ಸಂಸ್ಥೆ ಕಲ್ಪಿಸಿ, ಇ-ಟೆಂಡರ್ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ.

**ಟಿಂಬರ್ ಇ-ಟೆಂಡರ್ ಕಾರ್ಯ ವಿಧಾನ :**

★ ಅರಣ್ಯ ಇಲಾಖೆಯು ನಿಗದಿಪಡಿಸಿದ ದಿನಾಂಕದಂದು ಬೆಳಿಗ್ಗೆ 9.30 ರಿಂದ ಸಂಜೆ 4.30 ಗಂಟೆಯವರೆಗೂ ಖರೀದಿದಾರರು ಟಿಂಬರ್ ಇ-ಟೆಂಡರ್‌ನಲ್ಲಿ ಭಾಗವಹಿಸಿ, ಅಗತ್ಯ ಮರಗಳ ಲಾಟ್‌ಗಳಿಗೆ ಬಿಡ್ ಮಾಡಬಹುದು. **https://ka.remsl.in** ವೆಬ್‌ಸೈಟ್ ನ್ನು ಸಂಪರ್ಕಿಸಿ, ತಮಗೆ ನೀಡಿರುವ ಯೂಸರ್ ಐಡಿ **(User ID)** ಪಾಸ್‌ವರ್ಡ್ **(Password)**ನ್ನು ನಮೂದಿಸಿ ಟಿಂಬರ್ ಇ-ಟೆಂಡರ್ ವೇದಿಕೆಯನ್ನು ಪ್ರವೇಶಿಸಿ.

★ ಕಂಪ್ಯೂಟರ್ ಪರದೆಯ ಮೇಲಿನ ಬಲಭಾಗದ ಮೇಲಿನ ತುದಿಯಲ್ಲಿ ಟಿಂಬರ್ ಡಿಪೋ ಹೆಸರನ್ನು ಆಯ್ಕೆ ಮಾಡುವುದು.

★ ಇ-ಟೆಂಡರ್‌ನಲ್ಲಿ ಮರದ ಲಾಟ್‌ಗಳ ಮುಂದೆ ಖರೀದಿದಾರರು ಬೆಲೆಯನ್ನು ನಮೂದಿಸಬಹುದು.

★ ಬಳಿಕ ನಮೂದಿಸಿದ ಬೆಲೆಗೆ ಒಪ್ಪಿಗೆಯ ಗುಂಡಿಯನ್ನು ಕ್ಲಿಕ್ ಮಾಡುವುದು.

**ಮರ ಖರೀದಿದಾರರಿಗೆ ಮಾರ್ಗಸೂಚಿ :**

ಆನ್‌ಲೈನ್‌ನಲ್ಲಿ ವಿವಿಧ ಮರ ದಿಮ್ಮಿಗಳ ಮಾಹಿತಿ ಪರಿಶೀಲಿಸಿದ ಮರ ಖರೀದಿದಾರರು ಅಥವಾ ನೋಂದಣಿ ಮಾಡಿಕೊಂಡ ಸಾರ್ವಜನಿಕರು ಟೆಂಡರ್ ದಿನದಂದು ನಿಗದಿತ ಸಮಯದಲ್ಲಿ ಇ-ಟೆಂಡರ್ ಹಾಲ್‌ಗೆ ಬಂದು ಬಿಡ್ ಮಾಡಬಹುದು. ದೂರದಿಂದ ಇಲಾಖೆಯ ಇ-ಟೆಂಡರ್ ಹಾಲ್‌ಗೆ ಬರಲು ಸಾಧ್ಯವಾಗದೆ ಹೋದರೆ ಅವರು ಇದ್ದ ಸ್ಥಳದಿಂದಲೇ ಆನ್‌ಲೈನ್ ಮೂಲಕ ಅರಣ್ಯ ಉತ್ಪನ್ನಗಳ ಖರೀದಿಗೆ ಬಿಡ್ ಮಾಡಲು ಅವಕಾಶವಿದೆ.

ಅರಣ್ಯ ಇಲಾಖೆ ನಿಗದಿ ಪಡಿಸಿದ ಮುಂಗಡ ಠೇವಣಿ ಪಾವತಿ ಮಾಡಿ ಹೆಸರನ್ನು ನೋಂದಾಯಿಸಿಕೊಂಡ ರಾಜ್ಯದ ವರ್ತಕರು, ಹೊರ ರಾಜ್ಯದ ವರ್ತಕರು ಮತ್ತು ಸ್ವಂತಕ್ಕೆ ಮರ ಖರೀದಿಸಲು ಬಯಸುವ ನಾಗರೀಕರು ಇ-ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿದೆ. ಇ-ಟೆಂಡರ್‌ನಲ್ಲಿ ಬಿಡ್ ಮಾಡುವ ವೇಳೆ ಯಾವುದೇ ಸಹಕಾರಬೇಕಾದರೆ, ಇ-ಟೆಂಡರ್ ಹಾಲ್‌ನಲ್ಲಿ ಕಾರ್ಯ ನಿರ್ವಹಿಸುವ ದತ್ತಾಂಶ ನಿರ್ವಹಣೆ ಸಿಬ್ಬಂದಿಯನ್ನು ಸಂಪರ್ಕಿಸಬಹುದು.

**ಟೆಂಡರ್ ಡಿಕ್ಲರೇಷನ್ :**

ಟೆಂಡರ್ ದಿನದಂದು ಮಾರಾಟಕ್ಕೆ ನಿಗದಿ ಪಡಿಸಿದ ವಿವಿಧ ತಳಿಗೆ ಮರದ ದಿಮ್ಮಿಗಳ ಲಾಟ್‌ಗಳಿಗೆ ಮಾತ್ರ ಆನ್‌ಲೈನ್ ಮೂಲಕ ಇ-ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವಿವಿಧ ಲಾಟ್‌ಗಳಿಗೆ ಯಾರು ಹೆಚ್ಚಿನ ಬೆಲೆ ನಮೂದಿಸಿ ಬಿಡ್ ಮಾಡಿರುತ್ತಾರೋ ಅವರ ಹೆಸರನ್ನು ಟೆಂಡರ್ ಡಿಕ್ಲರೇಷನ್‌ನಲ್ಲಿ ಪ್ರಕಟಿಸಲಾಗುವುದು.

**ಟೆಂಡರ್ ವಿಜೇತರು ಬಿಡ್‌ನ ಒಟ್ಟು ಮೊತ್ತವನ್ನು ಪಾವತಿಸುವ ವಿಧಾನ :**

ವಿವಿಧ ಮರಗಳ ದಿಮ್ಮಿಗಳನ್ನು ಖರೀದಿಸಲು ಇ-ಟೆಂಡರ್‌ನಲ್ಲಿ ಭಾಗವಹಿಸಿ, ಅತೀ ಹೆಚ್ಚು ಬೆಲೆ ನಮೂದಿಸಿ ಬಿಡ್‌ನಲ್ಲಿ ವಿಜೇತರಾದವರು, ಅರಣ್ಯ ಇಲಾಖೆಯ ನಿಯಮಾನುಸಾರ 24 ಗಂಟೆ ಒಳಗೆ ಬಿಡ್‌ನ ಒಟ್ಟು ಮೊತ್ತವನ್ನು ಸಂಬಂಧಪಟ್ಟ ಡಿಪೋ ವ್ಯಾಪ್ತಿಯ ಇಲಾಖೆಗೆ ಪಾವತಿಸಬೇಕು. ಹಣ ಪಾವತಿ ಮಾಡಿದ ರಶೀದಿಯನ್ನು ಡಿಪೋದಲ್ಲಿ ತೋರಿಸಿದರೆ, ಖರೀದಿಸಿದ ಮರದ ದಿಮ್ಮಿಗಳನ್ನು ಸಾಗಿಸಲು ಪರವಾನಿಗೆಯನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**ಇ-ಟೆಂಡರ್‌ನಲ್ಲಿ ಮರ ಖರೀದಿಸುವಲ್ಲಿ ವಿಫಲರಾದರೆ ಠೇವಣಿ ಹಿಂಪಡೆಯುವುದು ಹೇಗೆ? :**

ಇ-ಟೆಂಡರ್‌ನಲ್ಲಿ ಮರದ ದಿಮ್ಮಿ ಖರೀದಿಸಲು ಬಿಡ್‌ನಲ್ಲಿ ಭಾಗವಹಿಸಿ, ಟೆಂಡರ್‌ನಲ್ಲಿ ವಿಫಲರಾದವರಿಗೆ ಅವರ ಠೇವಣಿ ಮೊತ್ತವನ್ನು ಸಂಬಂಧಪಟ್ಟ ಡಿಪೋ ವ್ಯಾಪ್ತಿಯಲ್ಲಿನ ಅರಣ್ಯ ಇಲಾಖೆಯವರು ಹಿಂದಿರುಗಿಸುವ ವ್ಯವಸ್ಥೆಯು ಜಾರಿಯಾಗಿದೆ.

**ದಾಂಡೇಲಿ ಅರಣ್ಯ ಇಲಾಖೆಯ ಡಿಪೋದಲ್ಲಿ ನಡೆದ ಇ-ಹರಾಜಿನ ವಿವರ :**

ಅರಣ್ಯ ಇಲಾಖೆಯ 30 ಮರಮಟ್ಟು ಸಂಗ್ರಹಾಲಯಗಳ ಪೈಕಿ, ಮೊದಲನೆಯದಾಗಿ ದಾಂಡೇಲಿ ಡಿಪೋದಲ್ಲಿನ 1052 ಲಾಟ್‌ಗಳಿಗೆ 19ನೇ ಸೆಪ್ಟಂಬರ್ 2016 ರಂದು ಆನ್‌ಲೈನ್ ಇ-ಟೆಂಡರ್ ಬಿಡ್ಡಿಂಗ್ ಮೂಲಕ ವ್ಯಾಪಾರ ವಹಿವಾಟು ನಡೆಸಲಾಗಿದೆ. ಆನ್‌ಲೈನ್ ಇ-ಟೆಂಡರ್ ವ್ಯವಸ್ಥೆ ಕಲ್ಪಿಸಿದ್ದರಿಂದ ಟಿಂಬರ್ ಮಾರಾಟದಲ್ಲಿ ಪಾರದರ್ಶಕತೆ ಮತ್ತು ಸರಳತೆ ಹೆಚ್ಚಾಗಿದೆ. ಇದೇ ಕಾರ್ಯವಿಧಾನವನ್ನು ಉಳಿದ ಎಲ್ಲಾ ಮರಮಟ್ಟು ಸಂಗ್ರಹಾಲಯಗಳಲ್ಲಿ ಅನುಷ್ಠಾನಗೊಳ್ಳಲಿದೆ.

ದಾಂಡೇಲಿಯಲ್ಲಿ ಪ್ರಪ್ರಥಮವಾಗಿ ನಡೆದ ಇ-ಟೆಂಡರ್ ಪ್ರಕ್ರಿಯೆಯನ್ನು ಬೆಳಿಗ್ಗೆ 9.30ಕ್ಕೆ ಆರಂಭವಾಗಿ ಸಂಜೆ 4.45ಕ್ಕೆ ಆನ್‌ಲೈನ್ ಬಿಡ್ ಪ್ರಕ್ರಿಯೆ ಮುಕ್ತಾಯವಾಯಿತು. ಸಂಜೆ 6 ಗಂಟೆ ವೇಳೆಗೆ ಬಿಡ್ ವಿಜೇತರ ಟೆಂಡರ್ ಡಿಕ್ಲೆರೇಷನ್ ಮಾಡಲಾಯಿತು. ಪ್ರಾಯೋಗಿಕ ವಾಗಿ ಆರಂಭವಾದ ಟಿಂಬರ್ ಇ-ಟೆಂಡರ್‌ನಿಂದ ಒಂದೇ ದಿನದಲ್ಲಿ ₹.3.32 ಕೋಟಿ ವ್ಯಾಪಾರ ವಹಿವಾಟು ನಡೆದಿದೆ.

**ಟಿಂಬರ್ ಖರೀದಿದಾರರ ಗಮನಕ್ಕೆ :**

2016ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿನ ಈ ಕೆಳಕಂಡ ನಾಲ್ಕು ವೃತ್ತಗಳಲ್ಲಿ ನಡೆಯುವ ಅರಣ್ಯ ಉತ್ಪನ್ನಗಳ ಇ-ಹರಾಜು/ಇ-ಟೆಂಡರ್ ದಿನಾಂಕಗಳನ್ನು ನಿರ್ದಿಷ್ಟ ಪಡಿಸಿರುವ ಮಾಹಿತಿ.

| **ವೃತ್ತ (ಸ್ಥಳ)** | **ಇ-ಟೆಂಡರ್ ದಿನಾಂಕ** |
|---|---|
| 1. ಮಂಗಳೂರು | 21-11-2016 ಮತ್ತು 01-12-2016 |
| 2. ಕೊಡಗು | 04-12-2016 |
| 3. ಬೆಳಗಾವಿ | 10-12-2016 |
| 4. ಧಾರವಾಡ | 26-12-2016 |

ಒಟ್ಟಾರೆ, ಅರಣ್ಯ ಇಲಾಖೆ ಮತ್ತು ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ಸಂಸ್ಥೆ ಸಹಭಾಗೀತ್ವದಲ್ಲಿ ಜಾರಿಯಾಗಿರುವ ಟಿಂಬರ್ ಇ-ಮಾರುಕಟ್ಟೆ ಲಾಭವನ್ನು ಮರದ ದಿಮ್ಮಿಗಳನ್ನು ಖರೀದಿಸುವ ಮಾರುಕಟ್ಟೆ ಭಾಗೀದಾರರು ಪಡೆದುಕೊಳ್ಳಬೇಕು ಎಂಬುದೇ ಅರಣ್ಯ ಇಲಾಖೆಯ ಆಶಯ. ★